ಇದ್ದು, ಬಡ ರೋಗಿಗಳಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ :

ಇ) ಅತಿ ಮುಖ್ಯವಾದಂತಹ ಹಾವು ಕಡಿತಕ್ಕೆ ಔಷಧಿ ಮತ್ತು ಇತರೆ ಪ್ರಾಣಾಪಾಯದ ಸಂಕಟದಿಂದ ಪಾರಾಗಲು ಸರಿಯಾದ ಔಷಧಿಗಳು ಈ ಆಸ್ಪತ್ರೆಯಲ್ಲಿ ಸಿಕ್ಕದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ :

ಈ) ಆಸ್ಪತ್ರೆಗೆ ಈಗ ಒದಗಿಸತಕ್ಕಂತಹ ಔಷಧಿಗಳು ಸುಮಾರು ಆರು ತಿಂಗಳಿಗೂ ಕೂಡ ಸಾಕಾಗುವುದಿಲ್ಲವಾದ್ದರಿಂದ ಇದನ್ನು ಸರಿದೂಗಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿರುತ್ತದೆ.

ಆ) ಬಂದಿರುವುದಿಲ್ಲ.

ಇ) ಇಲ್ಲ

ಈ) ನಿಗದಿತ ಅನುದಾನಕ್ಕೆ ಸರಿಯಾಗಿ ಔಷಧಿ ಸರಬರಾಜು ಮಾಡಲಾಗಿದ್ದು, ತುರ್ತು ಸಂದರ್ಭಗಳಲ್ಲಿ ಔಷಧಿ ಕೊರತೆ ಕಂಡುಬಂದಲ್ಲಿ ಇನ್ನೂ ಹೆಚ್ಚಿನ ಔಷಧಗಳನ್ನು ಸರಬರಾಜು ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

**ಬಾಗೇಪಲ್ಲಿ ತಾಲ್ಲೂಕ ಚೇಳೂರಿನ ಪದವಿ ಪೂರ್ವ ಕಾಲೇಜನ್ನು ವಜಾ ಮಾಡದೇ ಇರುವ ಬಗ್ಗೆ**

3531(4060) ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಗೇಪಲ್ಲಿ ತಾಲ್ಲೂಕು ಚೇಳೂರಿನಲ್ಲಿ ಪದವಿ ಪೂರ್ವ ಕಾಲೇಜು ಕಾರಣಾಂತರಗಳಿಂದ ವಜಾ ಆಗಿ ಪುನಃ ದಿನಾಂಕ 29.8.2002ರಲ್ಲಿ ಮಾನ್ಯತೆಯನ್ನು ಸರ್ಕಾರದ ಆದೇಶದಂತೆ ನೀಡಿರುವುದು ನಿಜವೇ :

ಆ) ಈ ಪದವಿ ಪೂರ್ವ ಕಾಲೇಜಿನಲ್ಲಿ 2002–03ನೇ ಸಾಲಿನಲ್ಲಿ ಶೇ. 65ರಷ್ಟು ಉತ್ತೀರ್ಣರಾಗಿದ್ದರೂ ಸಹ ಈ ವರ್ಷ ಸರ್ಕಾರದ ಆದೇಶ ಬರದೇ ಇದಕ್ಕೆ 1ನೇ ಪಿ.ಯು.ಸಿ.ಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಿಲ್ಲವೆಂದು ಪ್ರಾಂಶುಪಾಲರು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ :

ಇ) ಈ ಪದವಿ ಪೂರ್ವ ಕಾಲೇಜು ಚೇಳೂರಿನಿಂದ ಬೇರೆ ಪದವಿ ಪೂರ್ವ ಕಾಲೇಜುಗಳು ಚಿಂತಾಮಣಿ ಮತ್ತು ಬಾಗೇಪಲ್ಲಿಯಲ್ಲಿ ಬಿಟ್ಟರೆ ಬೇರೆ ಕಡೆ ಕಾಲೇಜು ಇರುವುದಿಲ್ಲ ಮತ್ತು ಈ ಎರಡು ಊರುಗಳಿಗೆ ಚೇಳೂರಿನಿಂದ 45 ಕಿ.ಮೀ. ದೂರ ಆಗುವುದು ಸರ್ಕಾರಕ್ಕೆ ತಿಳಿದಿದೆಯೇ :

ಈ) ಈ ಕಾಲೇಜಿನಲ್ಲಿ ಪಾಠ ಹೇಳುವ ಉಪನ್ಯಾಸಕರನ್ನು ಬೇರೆ ಕಡೆಗೆ ಡೆಪ್ಯೂಟೇಷನ್ ಮಾಡುವುದಲ್ಲದೇ ಪ್ರಾಧ್ಯಾಪಕರು ಸಹ ಸರಿಯಾಗಿ ಇಲ್ಲದೆ ಇರುವುದರಿಂದ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತಿರುವುದು ನಿಜವೇ :

ಉ) ಗ್ರಾಮಾಂತರ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಇರುವಂತಹ ಪದವಿ ಪೂರ್ವ ಕಾಲೇಜನ್ನು ಸರ್ಕಾರ ವಜಾ ಮಾಡದೇ ಮುಂದುವರಿಸುತ್ತಿದೆಯೇ ?

ಪ್ರೊ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು ಚೇಳೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ರದ್ದತಿ ಆದೇಶವನ್ನು ದಿನಾಂಕ 20.8.2002ರಲ್ಲಿ ಹಿಂದಕ್ಕೆ ಪಡೆದು ತಾತ್ಕಾಲಿಕವಾಗಿ 2002–03ನೇ ಸಾಲಿಗೆ ಮಾತ್ರ ಮುಂದುವರೆಸಲಾಗಿತ್ತು.

ಆ) ಈ ಪದವಿ ಪೂರ್ವ ಕಾಲೇಜಿನಲ್ಲಿ 2003ರಲ್ಲಿ ದ್ವಿತ್ತಿಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಗೆ 11 ಮಂದಿ ಕುಳಿತಿದ್ದು 4 ಮಂದಿ ತೇರ್ಗಡೆಯಾಗಿ ಕೇವಲ ಶೇ. 35ರಷ್ಟು ಫಲಿತಾಂಶ ಬಂದಿದೆ. ಕಾಲೇಜನ್ನು 2002–03ನೇ ಸಾಲಿಗೆ ಮಾತ್ರ ಮುಂದುವರೆಸಿದ್ದರಿಂದ ಪ್ರಾಂಶುಪಾಲರು 1ನೇ ಪಿ.ಯು.ಸಿ.ಗೆ ಪ್ರವೇಶ ನಿರಾಕರಿಸುವುದು ಕಂಡುಬಂದಿದೆ.

ಇ) ಹೌದು.

ಈ) ಈ ಪದವಿ ಪೂರ್ವ ಕಾಲೇಜಿನಲ್ಲಿ 2003ರ ರಲ್ಲಿ ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆಗೆ ಕೇವಲ 11 ವಿದ್ಯಾರ್ಥಿಗಳು ಕುಳಿತ್ತಿದ್ದು ಕೇವಲ 4 ವಿದ್ಯಾರ್ಥಿಗಳು ತೇರ್ಗಡೆಯಾಗಿರುತ್ತಾರೆ. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದರಿಂದ ಉಪನ್ಯಾಸಕರಿಗೆ ಪೂರ್ಣ 16 ಗಂಟೆಗಳ ಕಾರ್ಯಬಾಗವಿಲ್ಲದೆ, ಕೇವಲ 8 ಗಂಟೆಗಳ ಕಾರ್ಯಬಾರ ಇದ್ದುದ್ದರಿಂದ ಈ ಉಪನ್ಯಾಸಕರನ್ನು ವಾರದಲ್ಲಿ ಮೂರು ದಿನ ಬೇರೆ ಕಾರ್ಯಬಾರವಿರುವ ಪದವಿ ಪೂರ್ವ ಕಾಲೇಜಿಗೆ ಡೆಪ್ಯೂಟ್ ಮಾಡಲಾಗಿದೆ.

ಉ) ವಿದ್ಯಾರ್ಥಿಗಳ ಕೊರತೆಯ ಕಾರಣ ಈ ಕಾಲೇಜನ್ನು ಮುಂದುವರೆಸುವುದು. ಸೂಕ್ತವಲ್ಲವೆಂದು ಪರಿಗಣಿಸಿ ಈ ಕಾಲೇಜನ್ನು ಅಗತ್ಯವಿರುವ ಕಡೆ ಸ್ಥಳಾಂತರಿಸಲಾಗಿದೆ.

**ಚಿಂತಾಮಣಿ ತಾಲ್ಲೂಕಿನಲ್ಲಿ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು**

3532(4061) ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ಚೇಳೂರು ರಸ್ತೆಯಿಂದ ಏನಿಗದಾಲೆ ಹತ್ತಿರ ನವೋದಯ ವಿದ್ಯಾ ಸಂಸ್ಥೆಯಿಂದ ಚಿನ್ನಪಲ್ಲಿ ಮುಖಾಂತರ ಅಂಕಾಲಮಡಗು ಕಡೆಗೆ ಹೋಗುವ ರಸ್ತೆಯಿದ್ದು, ಈ ರಸ್ತೆಯಲ್ಲಿ ಓಡಾಡುವ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ಓಡಾಡುವುದಕ್ಕೆ ರಸ್ತೆ ಬಹಳ ಹದಗೆಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಈ ರಸ್ತೆ ಏನಿಗದಾಲೆಯಿಂದ ನವೋದಯ ವಿದ್ಯಾಲಯ ಮತ್ತು ಚಿನ್ನಪಲ್ಲಿಯವರೆವಿಗೂ ಸುಮಾರು 2 ಕಿ.ಮೀ. ಉದ್ದ ಬಹಳ ಹಳ್ಳಗಳಿಂದ ಕೂಡಿದ್ದು ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಅನೇಕ ಅಹವಾಲುಗಳನ್ನು ಸರ್ಕಾರಕ್ಕೆ ಕಳುಹಿಸಿದ್ದರೂ ಸಹ ಇದುವರೆವಿಗೂ ಏನು ಕ್ರಮ ತೆಗೆದುಕೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಈ ರಸ್ತೆ ಬಹಳ ಹದಗೆಟ್ಟಿರುವುದರಿಂದ ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯ ವಾಹನವನ್ನು ಚಿಂತಾಮಣಿಯಿಂದ ಬಿ. ಕೊತ್ತಕೋಟೆಗೆ ಈ ರಸ್ತೆ ಮುಖಾಂತರ ಹೋಗುತ್ತಿದ್ದ ಬಸ್ಸನ್ನು ನಿಲ್ಲಿಸಿರುವುದರಿಂದ ವಿದ್ಯಾರ್ಥಿಗಳಿಗೂ ಮತ್ತು ಸಾರ್ವಜನಿಕರಿಗೂ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ :